

ಪತ್ನಿ ಜಯಶ್ರೀ ಅವರೊಂದಿಗೆ ವೀರಣ್ಣ ದಂಡೆ

ಮಾದರಿಗೆ ಸೇರತದ ಅಂತ ನಿರ್ಣಯ ಮಾಡ್ಬೇಕು. ಕಥಿಗಳು ನಮ್ಮವು, ಶಾಸ್ತ್ರ ಪಾಶ್ಚಾತ್ಯರದ್ದು ಇದೆಲ್ಲ ಒಮ್ಮೊಮ್ಮ ನನಗ ವಿಚಾರಕ್ಕ ಹಚ್ಚಿತ್ತು. ಪ್ರತಿ ಕಥೆ ಓದುಬೇಕು, ಅದರ ಸಾರಂಶ ಬರೀಬೇಕು ಅದರ ಮೋಟಿಫ್‌ಗಳು ಗುರುತು ಮಾಡ್ಬೇಕು. ಇಂತವು ಸಾವಿರಾರು ಹೊಸ ಮೋಟಿಫ್‌ಗಳನ್ನು ಗುರುತಿಸಿದೆ. ಹೊಸ ಮಾದರಿಗಳನ್ನು ಗುರುತಿಸಿದೆ. ಜಗತ್ತಿನ ಮೋಟಿಫ್ ಇಂಡೆಕ್ಸ್ ಒಳಗ ಇರಲಾರದ ಸಾವಿರಾರು ಮೋಟಿಫ್‌ಗಳನ್ನು ಗುರುತಿಸಿದೆ. ಆಮೇಲೆ, ದೊಡ್ಡ ದೊಡ್ಡ ವಿದ್ವಾಂಸರು ಹೇಳಿದ ಸಿದ್ಧಾಂತಗಳಲ್ಲಿ ಏನು ತಪ್ಪಾಗಿದೆ ಅನ್ನೋದು ಗೊತ್ತಾಯ್ತು. ನಮ್ಮ ಕಥಿ ನಾವು ಓದೋದ್ರಿಂದ ಬಂದ ನಾಲೇಜ್ ಅದು. ಒಂದೇ ಮೋಟಿಫ್‌ನಿಂದ ಒಂದು ಕಥಿ ಆಗ್ತದ ಅಂತ ಸಿದ್ಧಾಂತ ಇತ್ತು. ಒಂದೇ ಮೋಟಿಫ್‌ನಿಂದ ಕಥಿ ಆಗಂಗಿಲ್ಲಾ ಆಗಲಿಕ್ಕೆ ಸಾಧ್ಯ ಇಲ್ಲ ಅನ್ನೊದು ನಮ್ಮ ಕಥಿ ಓದಿದಾಗ ಗೊತ್ತಾಯ್ತು. ಇಂಥ ಅನೇಕ ಒಳನೋಟಗಳು ಸಿಕ್ಕವು. ಅವನ್ನೆ ಥೀಸಿಸ್ ಒಳಗ ಸೇರಿಸಿದೆ. ಆಮೇಲೆ, ಇದು ಯಾಕ್ ಕಥಿ ಆಗಲ್ಲ, ಕಾರಣ ಏನು? ಇದೆಲ್ಲ ವಿವರಿಸಬೇಕಲ್ಲ. ನಮ್ಮ ಕಥೆಗಳ ಸ್ವತಂತ್ರ ಲಕ್ಷಣಗಳನ್ನು ಗುರುತು ಮಾಡಿದೆ. ಒಂದು ತಾತ್ವಿಕ ದೃಷ್ಟಿಕೋನ ಅಧ್ಯಯನದಿಂದ ತಾನಾಗಿಯೇ ಗೊತ್ತಾಗ್ತಾ ಹೋಯಿತು.

◆ **ಈಗ ಕನ್ನಡ ಜಾನಪದಕ್ಕೆ ಕನ್ನಡದೇ ಆದ ಸಿದ್ಧಾಂತಗಳು ಬೇಕು ಅಂತ ಚರ್ಚೆ ಶುರು ಮಾಡಿದವರಲ್ಲಿ ನೀವೂ ಒಬ್ರು. ನಿಮಗ ಯಾಕೆ ಇಂಥದ್ದೊಂದು ಹುಡುಕಾಟ ಮಾಡಬೇಕು ಅಂತ ಅನಿಸ್ತು?**

ಇದಕ್ಕೆ ಈ ಪಿಎಚ್.ಡಿ. ವಿಷಯನೇ ಕಾರಣ. ಆಶಯ ಮತ್ತು ಮಾದರಿಗಳ ಬಗ್ಗೆ ಅಧ್ಯಯನ ಮಾಡ್ಬೇಕಲ್ಲ. ಆಮೇಲೆ, ನಮ್ಮೂರಾಗ ಒಂದೀಟು ಹಾಡುಗಳಿದ್ದವು. ಹಾಡು ಅಂದ್ರ ಹೆಂಗ್ ಇರ್ತದ? ಹೆಂಗ್ ಹಾಡು ಕಟ್ತಾರ? ಯಾವ ಅಕ್ಷರ ಎಲ್ಲಿ ಇರ್ಬೇಕು? ಇದೆಲ್ಲ ಟಿಪ್ಪಣಿ ಮಾಡಿಕೊಂಡಿದ್ದು ಒಂದು ಪುಸ್ತಕದೊಳಗ ಬರ್ದಿಟ್ಟಿದ್ದೆ. 1968–1969ನೇ ಇಸ್ವಿ ಒಳಗ. ಈ ವಿಷಾಕ್ಷರಗಳ ಬಗ್ಗೆ ನಾಲೇಜ್ ಬಂದಿದ್ದು ಅವಾಗನೆ. ಪಿಎಚ್.ಡಿ. ಮಾಡುವಾಗ ಹೊರಗಿನ ಸಿದ್ಧಾಂತಗಳು ಭಾಳ ಗೊಂದಲ